ಅಗರ್ಬಿಗೆ ತಲೆ ಬಗ್ಗಿಸಿ, ತಾನು ಬ್ಯಾಂಕ್ ಚೇರ್ಮನರ ಕಾರ್ಯದರ್ಶಿ ಎಂದು ಪರಿಚಯಿಸಿಕೊಳ್ಳುತ್ತಾ ಅಗರ್ಬಿಯನ್ನು ಲಿಫ್ಟ್ ಹತ್ತಿಸಿ ಚೇರ್ಮನರ ಹನ್ನೊಂದನೇ ಮಹಡಿಯ ಮೇಲಿರುವ ಕಚೇರಿಗೆ ಕರೆದುಕೊಂಡು ಹೋದ. ಅಲ್ಲೀವರೆಗೆ ಅವರ ಮಧ್ಯೆ ಯಾವುದೇ ಮಾತುಕತೆ ನಡೆಯಲಿಲ್ಲ. ಹನ್ನೊಂದನೇ ಮಹಡಿಯಲ್ಲಿ ಇಳಿಯುತ್ತಿದ್ದಂತೆ ಕಾರ್ಯದರ್ಶಿ ಎದುರಿಗಿದ್ದ ಬಾಗಿಲನ್ನು ತಟ್ಟಿದ.

"ಪ್ಲೀಜ್ ಕಮ್ ಇನ್." ಒಳಗಿನಿಂದ ಒಂದು ಭಾರವಾದ ಸ್ವರ ಕೇಳಿಸಿತು.

"ಸರ್, ನಿಮ್ಮೆದುರಿಗಿದ್ದಾರೆ ನೈಜೀರಿಯಾದ ಮಾನ್ಯ ವಿತ್ತ ಮಂತ್ರಿ ಮಿಸ್ಟರ್ ಇಗ್ನೇಶಿಯಸ್ ಅಗರ್ಬಿ." ಕಾರ್ಯದರ್ಶಿ ನಾಟಕೀಯವಾಗಿ ಅಗರ್ಬಿಯನ್ನು ಬ್ಯಾಂಕಿನ ಚೇರ್ಮನರಿಗೆ ಪರಿಚಯಿಸಿದ.

ವಿಶಾಲವಾದ ಮೇಜಿನ ಹಿಂದೆ ಅಡಗಿಕೊಂಡಂತಿದ್ದ ಚೇರ್ಮನ್ ಸಾಹೇಬರು ನೈಜೀರಿಯಾದ ವಿತ್ತ ಮಂತ್ರಿಗಳನ್ನು ಭೇಟಿಯಾಗಲು ಎದ್ದು ಬಂದರು. ಅವರು ಕೂಡ ಬೂದು ಬಣ್ಣದ ಸೂಟು, ಟೈ, ಬಿಳಿ ಶರಟು ಧರಿಸಿರುವುದು ಅಗರ್ಬಿಯ ಸೂಕ್ಷ್ಮ ಕಣ್ಣುಗಳಿಗೆ ಗೋಚರಿಸದಿರಲಿಲ್ಲ.

> ಕಾರ್ಯದರ್ಶಿ ಮುಖವನ್ನು ಬೇರೆ ಕಡೆಗೆ ತಿರುಗಿಸಿದ. ಅವನು ಎರಡೂ ಕಿವಿಗಳನ್ನು ಗಟ್ಟಿಯಾಗಿ ಬೆರಳುಗಳಿಂದ ಮುಚ್ಚಿಕೊಂಡಿದ್ದ. ಅಗರ್ಬಿ ರಿವಾಲ್ವರನ್ನು ತಲೆಯ ಮೇಲಿಂದ ಹೊರತೆಗೆದು ತನ್ನ ಜೇಬಿಗಿಳಿಸಿ ಕುರ್ಚಿಯಲ್ಲಿ ಕುಳಿತುಕೊಂಡ.

"ಗುಡ್ ಮಾರ್ನಿಂಗ್ ಮಿನಿಸ್ಟರ್." ಎನ್ನುತ್ತಾ ಚೇರ್ಮನ್ ಸಾಹೇಬರು ಮುಂದೆ ಬಂದರು. "ದಯವಿಟ್ಟು ಆಸೀನರಾಗಿ... ನಿಮಗೆ ಅಭ್ಯಂತರವಿಲ್ಲದಿದ್ದಲ್ಲಿ ನಾನು ನಮ್ಮಿಬ್ಬರಿಗೂ ಕಾಫಿ ಆರ್ಡರ್ ಮಾಡಿದ್ದೇನೆ." ಎಂದರು.

ಇಗ್ನೇಶಿಯಸ್ ಅಗರ್ಬಿಗೆ ಯಾವುದೇ ಆಕ್ಷೇಪಗಳಿರಲಿಲ್ಲ. ಬ್ರೀಫ್‌ಕೇಸನ್ನು ತನ್ನ ಕಾಲ ಬುಡದಲ್ಲಿಟ್ಟು ಅವನು ಕಿಟಕಿಯಿಂದ ಹೊರಕ್ಕೆ ದೃಷ್ಟಿ ಹರಿಸಿದ. ಅಷ್ಟರಲ್ಲಿ ಒಬ್ಬಳು ಸುಂದರ ಸ್ವಿಸ್ ಯುವತಿ ಅವರ ಲೋಟಗಳಿಗೆ ಕಾಫಿ ಬಗ್ಗಿಸಿದಳು. ಎದುರಿಗೆ ಕಾಣಿಸುತ್ತಿದ್ದ ಕಾರಂಜಿಯ ಸೌಂದರ್ಯದ ಕುರಿತು ಅಗರ್ಬಿ ಎರಡು ವಾಡಿಕೆಯ ಮಾತುಗಳನ್ನಾಡಿದ.

ಕಾಫಿ ಕುಡಿಯುತ್ತಿದ್ದಂತೆ ಅಗರ್ಬಿ ವ್ಯವಹಾರದ ವಿಷಯಕ್ಕೆ ಬಂದ.

"ನಮ್ಮ ಅಧ್ಯಕ್ಷರ ವಿಶೇಷ ಕೋರಿಕೆಯ ಮೇರೆಗೆ ನಾನಿವತ್ತು ಇಲ್ಲಿಗೆ ಬಂದಿದ್ದೇನೆ..." ಅಗರ್ಬಿ ಹೇಳತೊಡಗಿದ. ಚೇರ್ಮನರು, ಕಾರ್ಯದರ್ಶಿಯ ಮುಖದ ಮೇಲೆ ಯಾವುದೇ ಬದಲಾವಣೆಗಳು ಕಾಣಿಸಲಿಲ್ಲ.

"ನಮ್ಮ ಅಧ್ಯಕ್ಷರು ನಿಮ್ಮ ಬ್ಯಾಂಕಿನಲ್ಲಿ ಖಾತೆಗಳನ್ನು ಹೊಂದಿರುವ ನೈಜೀರಿಯಾ ಪ್ರಜೆಗಳ ಬಗ್ಗೆ ತಿಳಿದುಕೊಂಡು ಬರಲು ನನ್ನನ್ನು ಕಳುಹಿಸಿದ್ದಾರೆ..."

ಇದನ್ನು ಕೇಳಿ ಚೇರ್ಮನರ ಮುಖಭಾವದಲ್ಲಿ ಯಾವುದೇ ಬದಲಾವಣೆಗಳು ಕಾಣಿಸಲಿಲ್ಲ. "ಕ್ಷಮಿಸಿ ಮಂತ್ರಿಗಳೆ. ಈ ವಿಷಯದಲ್ಲಿ ನಾನು ಅಸಹಾಯಕನಾಗಿದ್ದೇನೆ. ನಮ್ಮ ಗ್ರಾಹಕರ ಹೆಸರುಗಳನ್ನು ಯಾರಿಗೂ ಬಯಲು ಮಾಡುವ ಅಧಿಕಾರ ನನಗೆ ಇಲ್ಲ."

"ಕ್ಷಮಿಸಿ. ನಾನು ನಿಮಗೆ ಸರಿಯಾಗಿ ವಿವರಿಸಲಿಲ್ಲವೆಂದು ತೋರುತ್ತದೆ..." ಎನ್ನುತ್ತಾ ಅಗರ್ಬಿ